ಯಾವ ದಂಡವನ್ನು ವಿಧಿಸುವುದಿಲ್ಲ. 30 x40 ಅಳತೆಯ ನಿವೇಶನಕ್ಕೆ ಹತ್ತು ವರ್ಷಕ್ಕೆ 23 ಸಾವಿರ ರೂಪಾಯಿಗಳನ್ನು, 40 x60 ಅಳತೆಯ ನಿವೇಶನಕ್ಕೆ 40 ಸಾವಿರ ರೂಪಾಯಿಗಳನ್ನು ಹಾಗೂ 50 x80 ಅಳತೆಯ ನಿವೇಶನಕ್ಕೆ 1, 17,000 ರೂಪಾಯಿಗಳನ್ನು ದಂಡವನ್ನಾಗಿ ವಿಧಿಸಿ ವಸೂಲು ಮಾಡಲಾಗುವುದು.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಇವರು ಕೊಟ್ಟಿರುವಂತಹ ಉತ್ತರದಲ್ಲಿ ಹಂಚಿಕೆದಾರರಿಗೆ ನಿವೇಶನದ ನಿಜವಾದ ಅವಶ್ಯಕತೆ ಇರುವುದಿಲ್ಲವೆಂಬುದನ್ನು ತೋರಿಸುತ್ತದೆಂಬುದನ್ನು ಹೇಳಿದ್ದಾರೆ, ಅಲ್ಲದೇ ಲಾಭವನ್ನು ಗಳಿಸಬೇಕೆಂಬ ಉದ್ದೇಶದಿಂದ ನಿವೇಶನವನ್ನು ಪಡೆದಿರುತ್ತಾರೆಂಬ ಅಂಶ ಸ್ಪಷ್ಟವಾಗುತ್ತದೆ ಎಂದು ಹೇಳಿದ್ದಾರೆ. ಇದರ ಜೊತೆಗೆ ಇನ್ನೊಂದು ಅಂಶವಿರಬಹುದು. ಅನೇಕ ಬಡಾವಣೆಗಳಲ್ಲಿ ಬಿ. ಡಿ. ಎ. ಯಿಂದ ಮೂಲಭೂತವಾದ ಸೌಲಭ್ಯಗಳನ್ನು ಕೊಟ್ಟಿರವುದಿಲ್ಲ, ರಸ್ತೆಗಳು, ಒಳಚರಂಡಿ ವ್ಯವಸ್ಥೆ ಇಂಥಾದ್ದು ಆಗಿಲ್ಲ. ಈ ಅಂಶವನ್ನು ತಾವು ಮನಗಾಣಬೇಕು, ಇದರ ಜೊತೆಗೆ ಸದರಿ ತಿದ್ದುಪಡಿ ಎಂದು ಗುತ್ತಿಗೆಯ ಅವಧಿಯಲ್ಲಿ ಕಟ್ಟಡವನ್ನು ಕಟ್ಟದೆ ಇದ್ದಲ್ಲಿ ದಂಡವನ್ನು ವಿಧಿಸಲಾಗುತ್ತದೆ ಎಂದು ತಿಳಿಸಿದ್ದಾರೆ. ಈ ರೀತಿಯಾಗಿ ದಂಡವನ್ನು ವಿಧಿಸಿದರೆ ಬಿ. ಡಿ. ಎಯವರಿಗೆ ದುಡ್ಡು ಬರುತ್ತದೆ. ಇಲ್ಲಿ ಮನೆಗಳನ್ನು ಅಕ್ಕಪಕ್ಕದಲ್ಲಿ ಕಟ್ಟಿಕೊಂಡು ಕಸಕಡ್ಡಿಗಳ ಕಷ್ಟವನ್ನು ಅನುಭವಿಸುವವರಿಗೆ ಈ ಬಿ. ಡಿ. ಎಯವರು ಏನು ಸೌಲಭ್ಯವನ್ನು ಮಾಡುತ್ತಿದ್ದಾರೆ. ಇಲ್ಲಿ ಬಿ. ಡಿ. ಎ ಯವರು ದಂಡವನ್ನು ವಿಧಿಸಿ ದುಡ್ಡನ್ನು ಮಾಡಿಕೊಳ್ಳಬಹುದು. ದುಡ್ಡು ಇರುವವರಿಗೆ ದಂಡವನ್ನು ವಿಧಿಸಿ ಹಣವನ್ನು ಮಾಡಿಕೊಳ್ಳಬಹುದು. ಇಲ್ಲದಿರುವಂತಹ ಜನರ ಕಥೆ ಏನು? ಈಗ ಕಾರ್ಪೊರೇಷನ್‌ನಲ್ಲಿ ಇರುವ ಹಾಗೆ ಹೆಲ್ತ್ ಯೂನಿಟ್ ಎಂದು ಇಲ್ಲ, ಈ ಬಿ. ಡಿ. ಎ. ಯವರು ಕಸವನ್ನು ಕಲೆಕ್ಟ್ ಮಾಡುವಂತಹ ವ್ಯವಸ್ಥೆ ಇಲ್ಲ. ಈ ರೀತಿ ಇರುವಾಗ ಈ ವಲಯಗಳಲ್ಲಿ ಕಸಕಡ್ಡಿಗಳನ್ನು ತೆಗೆದುಕೊಂಡು ಹೋಗುವಂಥಾದ್ದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ, ಇದು ಸ್ಪಚ್ಛ ಬೆಂಗಳೂರು ನಿರ್ಮಾಣ ಕಾರ್ಯಕ್ರಮದ ವ್ಯಾಪ್ತಿಯಲ್ಲಿ ಬರುತ್ತದೆ, ಅವರಿಗೆ ಇದನ್ನು ನೋಡುವುದಕ್ಕೆ ಹೇಳುತ್ತೇವೆ.

ಹೊನ್ನಾವರ ತಾಲ್ಲೂಕಿನ ಮಂಕಿಯ ಕೆ.ಇ.ಬಿ. ಉಪಕೇಂದ್ರ

176 (1807) ಶ್ರೀ ನಾಯಕ್ ಜೆ.ಡಿ (ಭಟ್ಕಳ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊನ್ನಾವರ ತಾಲ್ಲೂಕಿನ ಮಂಕಿಯಲ್ಲಿ ತೆರೆಯಲು ಉದ್ದೇಶಿಸಿರುವ ಕೆ.ಇ.ಬಿ. ಉಪ ಕೇಂದ್ರ ಯಾವ ಹಂತದಲ್ಲಿದೆ?

ಆ) ಸದರಿ ಕಛೇರಿಯನ್ನು ಎಂದಿನಿಂದ ತೆರೆಯಲಾಗುವುದು?

ಶ್ರೀ ವೀರಕುಮಾರ್ ಎ. ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಹೊನ್ನಾವರ ತಾಲ್ಲೂಕಿನ ಮಂಕಿಯಲ್ಲಿ ಪ್ರಸ್ತುತ ಯಾವುದೇ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆ ಇರುವುದಿಲ್ಲ. ಆದರೆ, ಈ ಗ್ರಾಮದಲ್ಲಿ ಒಂದು ಲೆಕ್ಕ ರಹಿತ ಶಾಖಾ ಕಛೇರಿ (ನಾನ್-ಅಕೌಂಟಿಂಗ್ ಸೆಕ್ಷನ್ ಆಫೀಸ್) ಯನ್ನು ತೆರೆಯುವ ಬಗ್ಗೆ ಒಂದು ಪ್ರಸ್ತಾವನೆ ಇದ್ದು, ಈ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.

ಅ) ಸದರೀ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ, ಅದನ್ನು ನಿಗಮದ ಅಂತರಿಕ ನಿರ್ವಹಣಾ ಸಮಿತಿಯ ಮುಂದೆ ಮಂಡಿಸಿ, ಈ ಸಮಿತಿಯು ತೆಗೆದು ಕೊಳ್ಳುವ ತೀರ್ಮಾನದ ಪ್ರಕಾರ ಮುಂದಿನ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಜೆ. ಡಿ. ನಾಯಕ್ : ಮಾನ್ಯ ಅಧ್ಯಕ್ಷರೆ, ಹೊನ್ನಾವರ ತಾಲ್ಲೂಕಿನ ಮಂಕಿಯಲ್ಲಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆ ಬಗ್ಗೆ ಕೇಳಿದ್ದೆ. ಅದಕ್ಕೆ ಸರ್ಕಾರದವರು ಉತ್ತರ ಕೊಡುತ್ತಾ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ, ಆದರೆ ಈಗ ಅಲ್ಲಿ ನಾನ್ ಅಕೌಂಟಿಂಗ್ ಸೆಕ್ಷನ್ ಆಫೀಸ್ ತೆಗೆಯುವ ಬಗ್ಗೆ ಹೇಳಿದ್ದಾರೆ. ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಆದಷ್ಟು ಬೇಗ ಸದರಿ ಉಪ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳುತ್ತೇನೆ. ನನ್ನ ಮತಕ್ಷೇತ್ರದಲ್ಲಿ ಮುಖ್ಯ ಲೈನ್ ಮಿನಿಮಮ್ ಚಾರ್ಜ್ ಎಂದು ವಸೂಲು ಮಾಡುವಂತಹ ಕೆಲಸವನ್ನು ಕೆ.ಇ.ಬಿ. ಕೆ.ಪಿ.ಸಿ. ಯವರು ಮಾಡುತ್ತಿದ್ದಾರೆ. ಈ ಚಾರ್ಜ್ ಎಷ್ಟು ಬರುತ್ತದೆಂದರೆ ಜನರು ವಿದ್ಯುತ್ ಏನು ಬಳಕೆ ಮಾಡುತ್ತಾರೆ ಅದರ ಮೂರು-ನಾಲ್ಕು ಪಟ್ಟು ಹೆಚ್ಚಿಗೆ ವಿದ್ಯುತ್ ಬಿಲ್ ಕೊಡುತ್ತಿದ್ದಾರೆ. ಈ ಪ್ರಶ್ನೆ ಸಪ್ಲಿಮೆಂಟರಿಯಲ್ಲಿ ಬಂದಿಲ್ಲ. ಆದುದರಿಂದ, ದಯಮಾಡಿ ಇದರ ಬಗ್ಗೆ ತಮ್ಮ ನಿಲುವು ಏನೆಂಬುದನ್ನು ಕೇಳುತ್ತೇನೆ. ಇದರಿಂದ ಬಡವರಿಗೆ ಒಂದು ಸಾವಿರ ರೂಪಾಯಿಗಳಿಂದ ಮೂರು ಸಾವಿರ ರೂಪಾಯಿಗಳವರೆಗೆ ಬಿಲ್ ಬರುತ್ತಿದೆ. ಇದನ್ನು ಕೇಳಿದರೆ ಲೈನ್ ಮಿನಿಮಮ್ ಚಾರ್ಜ್ ಎಂದು ಕಂಬಕ್ಕೆ, ಇನ್ನಿತರ ಬೇರೆ ಬೇರೆ ಸಾಮಗ್ರಿಗಳಿಗೆ ಹಾಕುವಂಥಾದ್ದು ಕೊಡಬೇಕೆಂದು ಹೇಳುತ್ತಾರೆ. ಇದು ಗ್ರಾಮಾರಾಣ ಪ್ಲಾಟ್‌ಗಳಿಗೆ ಇಲ್ಲ. ಅವು ಮುನಿಸಿಪಲ್ ಏರಿಯಾಕ್ಕೆ ಹೊಂದಿಕೊಂಡು ಇದೆ. ಆದುದರಿಂದ ಅದನ್ನು ಬಿಟ್ಟು ಗ್ರಾಮಾಂತರ ಪ್ರದೇಶಗಳಲ್ಲಿ ವಸೂಲು ಮಾಡುತ್ತಿದ್ದಾರೆ. ಆದುದರಿಂದ, ದಯಮಾಡಿ ಈ ಪದ್ಧತಿಯನ್ನು ರದ್ದು ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ವೀರಕುಮಾರ್ ಎಲ್ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಹೊನ್ನಾವರ ತಾಲ್ಲೂಕಿನ ಮಂಕಿಯಲ್ಲಿ 33 ಕೆ.ವಿ. ಸಬ್ ಸ್ಟೇಷನ್ ಮಾಡುವ ಪ್ರಶ್ನೆ ಬರುವುದಿಲ್ಲ. ಏಕೆಂದರೆ ಮುರಡೇಶ್ವರದಲ್ಲಿ 110 ಕೆ.ವಿ. ಸ್ಟೇಷನ್ ಆಗುತ್ತಿದೆ. ಇನ್ನು ಸಬ್ ಸೆಕ್ಷನ್ ಆಫೀಸ್ ಬಗ್ಗೆ ಹೇಳಿದ್ದಾರೆ. ಇದನ್ನು ಬರುವ ಆರು ತಿಂಗಳಲ್ಲಿ ಚಾಲು ಮಾಡುತ್ತೇವೆ.

ಶ್ರೀ ಹೆಚ್. ಸಿ. ಬಸವರಾಜು : ಮಾನ್ಯ ಅಧ್ಯಕ್ಷರೆ, ಪಿರಿಯಾಪಟ್ಟಣ ಕತ್ತಲಲ್ಲಿ ಮುಳುಗಿದೆ. ತಾವು ಇಲ್ಲಿ ಸಬ್ ಸ್ಟೇಷನ್ ಅನ್ನು ಆರು ತಿಂಗಳಲ್ಲಿ ಮಾಡಿಸಿ ಕೊಡುತ್ತೇವೆಂದು ಹೇಳಿದ್ದೀರಿ, ತಾವು ಹೇಳಿ ಆರು ತಿಂಗಳಾಯಿತು.

ಅಧ್ಯಕ್ಷರು : ಅದರ ಬಗ್ಗೆ ತಾವು ಬೇರೆ ಪ್ರಶ್ನೆಯನ್ನು ಕೇಳಿ.

ಭದ್ರಾ ಜಲಾಶಯ ಯೋಜನೆಗೆ ಬಿಡುಗಡೆಯಾದ ಹಣ

173 (1672) ಶ್ರೀ ನೀಲಕಂಠಪ್ಪ ಬಿ. ಆರ್ (ತರೀಕೆರೆ) : ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭದ್ರಾ ಜಲಾಶಯ ಯೋಜನೆಯಲ್ಲಿ ಭದ್ರಾ ವೃತ್ತಕ್ಕೆ 1998- 1999- 2000ನೇ ಸಾಲಿನಲ್ಲಿ ಬಿಡುಗಡೆ ಆಗಿರುವ ಹಣವೆಷ್ಟು;